ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಮಿಕ ವರ್ಗದವರಿಗೆ ಹಂಚಿಕೆಯಾಗಿರುವ ಕಿಟ್ ವಿವರಣೆ

ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

800 (932) ಮಾನ್ಯ ಕಾರ್ಮಿಕ ಹಾಗೂ ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕೊರೋನಾದಿಂದ ಲಾಕ್‌ಡೌನ್ ಘೋಷಣೆಯಾದ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಕಾರ್ಮಿಕ ವರ್ಗದವರಿಗೆ ನೆರವಾಗಲು ಮೂಲ ಸಲಕರಣೆಗಳನ್ನೊಳಗೊಂಡ ಕಿಟ್‌ಗಳನ್ನು ಪೂರೈಸುವ ಯೋಜನೆಯನ್ನು ಜಾರಿಗೊಳಿಸಿ, ಸದರಿ ಯೋಜನೆಯನ್ವಯ ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಕಿಟ್‌ಗಳನ್ನು ಪೂರೈಸಲಾಗಿದೆ ;

(ಆ) ಸದರಿ ಕಿಟ್‌ಗಳನ್ನು ನೀಡುವಾಗ ನಿಗಧಿಪಡಿಸಿದ ಮಾನದಂಡಗಳು ಹಾಗೂ ಅರ್ಹತೆಗಳೇನು ;

(ಇ) ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ, ಖಾಸಗಿ ವ್ಯಕ್ತಿಗಳ ಮನೆಗಳಲ್ಲಿ ಸರ್ಕಾರದ ಯೋಜನೆಯ ಫುಡ್‌ಕಿಟ್‌ಗಳನ್ನು ಸಂಗ್ರಹಿಸಿಟ್ಟು, ಕಾರ್ಮಿಕರಲ್ಲದವರಿಗೆ ಕಿಟ್ ವಿತರಿಸಿರುವುದರ ಮೂಲಕ ಸರ್ಕಾರ ಯೋಜನೆಯ ದುರುಪಯೋಗ ಮಾಡಿಕೊಳ್ಳುತ್ತಿದ್ದ ವಿಷಯದ ಕುರಿತು ದೂರನ್ನು ನೀಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ಅಸಂವಿಧಾನಿಕವಾಗಿ ಕಿಟ್‌ಗಳ ಪೂರೈಕೆ ಮಾಡಿದ ವ್ಯಕ್ತಿಗಳು ಹಾಗೂ ಸ್ಥಳದಲ್ಲಿ ಹಾಜರಿದ್ದು, ಅಕ್ರಮವನ್ನು ತಡೆಯದೆ ನಿರ್ಲಕ್ಷ್ಯತೆಯನ್ನು ತೋರಿದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ;

(ಉ) ಅಕ್ರಮವನ್ನು ತಡೆಯದೆ ನಿರ್ಲಕ್ಷ್ಯತೆಯನ್ನು ತೋರಿದ ಅಧಿಕಾರಿಗಳ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದೆ, ಎಫ್.ಐ.ಆರ್. ದಾಖಲಿಸದೆ, ವಿಳಂಬ ಮಾಡುತ್ತಿರಲು ಕಾರಣಗಳೇನು ?